

ಮಿಶ್ರಿತ ಹಳದಿ ಬಣ್ಣದ ಕಷಾಯ ತಯಾರಾದ ಕೂಡಲೇ ಪಾತ್ರೆಯನ್ನು ಕೆಳಗಿಳಿಸಿ, ಲೋಟಕ್ಕೆ ಬಗ್ಗಿಸಿ ಸುಸ್ವರನ ಕೈಗೆ ಒಯ್ದು ಕೊಟ್ಟಳು. ಸುಸ್ವರನೂ ಅಮ್ಮನ ಹಟಕ್ಕೆ ಎದುರಾಡದೆ ಸುಮ್ಮನೆ ಕುಡಿದು ಮಲಗಿದ. ರಾತ್ರಿಯ ಊಟವಾದ ನಂತರ ಎಲ್ಲ ಎತ್ತಿಟ್ಟು, ಮುಚ್ಚಿಟ್ಟು ಅಡುಗೆಮನೆ ಒರೆಸತೊಡಗಿದಳು. ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದರೂ, ಮನಸೆಲ್ಲ ನಾಳೆಯ ಬಗ್ಗೆಯೇ ಯೋಚಿಸುತ್ತಿತ್ತು... ಕೊನೆಗೂ ಗಂಡನಿಗೆ ತನ್ನ ಮೇಲೆ ಕರುಣೆ ಬಂತಲ್ಲ. ಇಷ್ಟು ದಿನ ತಾಳ್ಮೆಯಿಂದ ಇದ್ದದ್ದಕ್ಕೂ ಸಾರ್ಥಕ ಆಯ್ತು ಅಂತೆಲ್ಲಾ ಭಾವಿಸಿ ಖುಷಿಯಾದಳು. ಮಳೆ ಮತ್ತೆ ಜೋರಾಗಿ ಸುರಿಯತೊಡಗಿತು. ಆ ಗಟ್ಟಿ ಹನಿಗಳ ವೇಗಕ್ಕೆ ಸಿಕ್ಕು ಹಂಚುಗಳು ಟಪಟಪ ಶಬ್ದ ಮಾಡತೊಡಗಿದವು. ರಾತ್ರಿಯೆಲ್ಲಾ ಆಕಾಶ ಬರಿದಾಗುವಂತೆ ಸುರಿಯಿತು ಮಳೆ. ಆ ಜೋಗುಳದ ಸದ್ದಿಗೆ ಮಂಪರು ಕವಿದು ಮಲಗಿದ ಪ್ರತಿಮಾ, ಗಾಢ ನಿದ್ರೆಗೆ ಜಾರಿದ್ದಳು.

ಮರು ದಿನ ಮಳೆ ಕೊಂಚ ಬಿಡುವು ಪಡೆಯಿತು. ನೆನ್ನೆ ಬಿದ್ದ ಬಿರುಮಳೆ ಉಂಟು ಮಾಡಿದ್ದ ಕೊರಕಲಿನಲ್ಲಿ ಅಳಿದುಳಿದ ಮಳೆ ನೀರು ಹರಿಯುತ್ತಿತ್ತು. ಬಿಸಿಲ ಒಂದೆಳೆ ಮಾತ್ರ ಹರಡಿಕೊಂಡು ಗಿಡ, ಮರ, ಹೂ, ಬಳ್ಳಿಗಳು ಹಚ್ಚ ಹಸುರಾಗಿ ಮಿರಿ ಮಿರಿ ಮಿನುಗುತ್ತಿದ್ದವು. ವಾತಾವರಣ ಉಲ್ಲಾಸಮಯವಾಗಿತ್ತು. ಗಂಡ ಹೆಂಡಿರಿಬ್ಬರೂ ಗಾಡಿ ಹತ್ತಿ ಪೇಟೆಯ ಕಡೆ ಹೊರಟಾಗ ಹತ್ತಾಗಿರಬೇಕು. ಸುಸ್ವರ ಜೋರು ಹಟ ತೆಗೆದಿದ್ದ. ತಾನೂ ಬರುತ್ತೇನೆಂದು. ಕೊನೆಗೆ ರಾಜಿಯೇ, 'ನೀವ್ ಹೊಂಡ್ರಿ, ನಾ ನೋಡ್ಕತೇನೆ ಇವ್ನ...' ಅಂತ ಅವನನ್ನು ಗಟ್ಟಿಯಾಗಿ ಹಿಡಿದುಕೊಂಡು ಹೊರಡಲು ಅನುವಾಗಿದ್ದಳು. ತಿರುವಿನಲ್ಲಿ ಗಾಡಿ ತಿರುಗುವಾಗಲೂ ಸುಸ್ವರನ ಕೂಗು ಕೇಳಿಸುತ್ತಿತ್ತು. ಇನ್ನೂ ಚೂರು ಮುಂದಕ್ಕೆ ಸಾಗಿದಾಗ ಧ್ವನಿ ಕೇಳದಾಯಿತು.

ಆಸ್ಪತ್ರೆ ತಲುಪುವವರೆಗೂ ಮಾಧವ ಮಾತಾಡಲಿಲ್ಲ. ಪ್ರತಿಮಾಳಿಗೆ ಕೊಂಚ ನಿರಾಸೆಯಾದರೂ ತೋರಿಸಿಕೊಳ್ಳಲಿಲ್ಲ. ಬಂದದ್ದು ಆಸ್ಪತ್ರೆಗಾದರೂ ಯಾವುದೋ ಸಮಾರಂಭಕ್ಕೆಂಬಂತೆ ತಯಾರಾಗಿ